PW-01

ಇಂದು ದಿ.07-02-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಿ ಮುಖ್ಯ ವಿಚಾರಣೆಗೆ ಒಳಪಡಿಸಲಾಯಿತು.

**ಮುಖ್ಯ ವಿಚಾರಣೆ:-** ವಾದಿಪರ ಶ್ರೀ ಎಸ್ ಎನ್ ಪಿ ವಕೀಲರಿಂದ.

ನಾನು ಈ ಪ್ರಕರಣದಲ್ಲಿ ವಾದಿ ಇದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಪ್ರಮಾಣೀಕರಿಸಿ ನ್ಯಾಯಾಲಯಕ್ಕೆ ಹಾಜರು ಮಾಡಿದ್ದು ಅದರಲ್ಲಿನ ಎಲ್ಲಾ ಸಂಗತಿಗಳು ನನಗೆ ಓದಿ ತಿಳಿಸಿ ಹೇಳಿದ್ದು ಸತ್ಯದಿಂದ ಕೂಡಿದೆ ಹಾಗೂ ಈ ಪ್ರಮಾಣ ಪತ್ರವನ್ನು ತಯಾರಿಸಲು ವಕೀಲರಿಗೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ನನ್ನ ಮುಖ್ಯ ವಿಚಾರಣೆಯನ್ನು ಪುರಸ್ಕರಿಸಲು ಈ ಕೆಳಕಂಡ ದಾಖಲೆಗಳನ್ನು ಹಾಜರುಪಡಿಸುತ್ತಿದ್ದೇನೆ.

ಒಂದು ಕ್ರಯದ ಕರಾರು ಪತ್ರದ ನಿಜ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ.1 ಎಂದು ಗುರುತಿಸಲಾಯಿತು. ಅದರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ಒಂದು ಕಂಪ್ಯೂಟರೈಸಡ್ ಆರ್ ಟಿ ಸಿ ಹಾಜರುಪಡಿಸಿದ್ದು ,ಅ ದನ್ನು ನಿಪಿ.2 ಎಂದು ಗುರುತಿಸಲಾಯಿತು.

ಒಂದು ವಕೀಲರ ತಿಳುವಳಿಕೆ ಪತ್ರದ ಪ್ರತಿ ಹಾಜರುಪಡಿಸಿದ್ದು , ಅದನ್ನು ನಿಪಿ.3 ಎಂದು ಗುರುತಿಸಲಾಯಿತು.

ಮೂರು ಅಂಚೆ ರಸೀದಿ ಹಾಜರುಪಡಿಸಿದ್ದು , ಅಗವುಳನ್ನು ಒಟ್ಟಾಗಿ ನಿಪಿ.4 ಎಂದು ಗುರುತಿಸಲಾಯಿತು.

ಮೂರು ಅಂಚೆ ಸ್ವೀಕೃತಿ ಹಾಜರುಪಡಿಸಿದ್ದು , ಅವುಗಳನ್ನು ಒಟ್ಟಾಗಿನಿಪಿ.5 ಎಂದು ಗುರುತಿಸಲಾಯಿತು.

ಕಾನೂನು ತಿಳುವಳಿಕೆ ಪತ್ರದ ಉತ್ತರ ಹಾಜರುಪಡಿಸಿದ್ದು , ಅದನ್ನು ನಿಪಿ.6 ಎಂದು ಗುರುತಿಸಲಾಯಿತು.

ಒಂದು ನಮೂನೆ-16ರ ದೃಢೀಕೃತ ಪ್ರತಿ ಹಾಜರುಪಡಿಸಿದ್ದು, ಅದನ್ನು ನಿಪಿ.7 ಎಂದು ಗುರುತಿಸಲಾಯಿತು.

ಒಂದು ಶುದ್ಧ ಕ್ರಯ ಪತ್ರದ ದೃಢೀಕೃತ ನಕಲು ಹಾಜರುಪಡಿಸಿದ್ದು, ಅದನ್ನು ನಿಪಿ.8 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಅನುಮತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)
ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಹೊನ್ನಾಳಿ.